**ಎಂ ವಿ ಸಿ 1259/2024 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿ: 23.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಕೆ ಪಿ ಕೆ ವಕೀಲರ ಪರವಾಗಿ ಶ್ರೀ ಎಂ ಜಿ ಎಸ್ ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ ನಾನು ಪ್ರಯಾಣಸುತ್ತಿದ್ದ ಮೋಟಾರು ಬೈಕ್ ನ್ನು ನಾನೇ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಪಿ ಯು ಸಿ ಓದಿದ್ದೇನೆ. ನಾನು ಚಾಲನೆ ಮಾಡುತ್ತಿದ್ದ ಬೈಕು ನನ್ನದೆ ಆಗಿದ್ದು ಅದು ನನ್ನ ಹೆಸರಿನಲ್ಲಿ ಇದೆ. ಅಪಘಾತ ಸಮಯದಲ್ಲಿ ನನ್ನ ಮೋಟಾರು ಬೈಕ್‌ಗೆ ವಿಮ ಇರಲಿಲ್ಲ ಎಂದರ ಸರಿ. ಆ ಸಮಯದಲ್ಲಿ ನಾನು ಡಿ ಎಲ್ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಡಿ ಎಲ್ ಹೂಂದಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಡಿ ಎಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಪಘಾತಪಡಿಸಿದ ಕಾರು ಎದುರಿನಿಂದ ಬಂದು ಡಿಕ್ಕಿಪಡಿಸಿತು. ಕಾರು ತನ್ನ ಪಥದಲ್ಲಿ ಚಲಿಸುತ್ತಿದ್ದರೂ ಸಹ ನಾನೇ ಅತಿವೇಗವಾಗಿ ಹೋಗಿ ಆ ಕಾರಿಗೆ ಗುದ್ದಿ ಅಪಘಾತ ಉಂಟು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಳಗೆ ಬಿದ್ದಾಗ ನನಗೆ ಪ್ರಜ್ಞೆ ಇತ್ತು ಎಂದರೆ ಸರಿಯಲ್ಲ. ನನಗೆ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿತು. ನನಗೆ ಗಾಯಗಳು ಹೇಗೆ ಆಯಿತು ಎಂದು ನಾನು ವೈದ್ಯರಿಗೆ ಹೇಳಿ ಬರೆಸಿಲ್ಲ. ನಾಗರಾಜೇಗೌಡ ಆಸ್ಪತ್ರೆಯಲ್ಲಿ ನನ್ನ ಬಲಗೈ ಮೂಳೆಗೆ ಮತ್ತು ಬಲಗಾಲಿಗೆ ಚಿಕಿತ್ಸೆ ಪಡೆದುಕೊಂಡೆ. ನನಗೆ ಆ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆ ನಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಶಸ್ತ್ರ ಚಿಕಿತ್ಸೆ ನಡೆಸಿದ ವೈದ್ಯರ ಹೆಸರು ನಾಗರಾಜೇಗೌಡ. ನನಗೆ ರೂ. 8 ಲಕ್ಷದಷ್ಟು ವೈದ್ಯಕೀಯ ವೆಚ್ಚ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ.

ನಾನು ಈಗ ಕೂಲಿ ಕೆಲಸ ಮತ್ತು ವ್ಯವಸಾಯ ಮಾಡುತ್ತಿಲ್ಲ. ನಾನು ಮೊದಲು ಹೇಗೆ ಕೆಲಸ ಮಾಡುತ್ತಿದ್ದೆನೋ ಈಗಲೂ ಹಾಗೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರಾಮದಾಯಕವಾಗಿ ಇದ್ದರೂ ಸಹ ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನ ಹಾಗೆ ಕೆಲಸ ಮಾಡಿಕೊಂಡು

ಹೋಗುತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳಿಗೆ ಯಾವುದೇ ಸಲಹಾ ಚೀಟಿ ಇಲ್ಲದೆ ಇರುವ ಕಾರಣ ಅವು ಸೃಷ್ಟಿತ ಬಿಲ್ಲುಗಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳಿಗೆ ಆಸ್ಪತ್ರೆಯ ಸೀಲು ಮತ್ತು ಸಹಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ತನಿಖೆನಡೆಸಿ ಅಪಘಾತದಲ್ಲಿ ನನ್ನ ತಪ್ಪು ಇದೆ ಎಂದು ನನ್ನ ವಿರುದ್ಧವೂ ಸಹ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತ ನಡೆದ ಸಮಯದಲ್ಲಿ 4 ರಸ್ತೆಗಳು ಕೂಡುವ ಕಾರಣ ಅಲ್ಲಿ ವಾಹನಗಳು ಅತಿವೇಗವಾಗಿ ಚಲಿಸುವುದಿಲ್ಲ ಎಂದರೆ ಸರಿಯಲ್ಲ. ಕಾರು ತನ್ನ ಎಡಪಥದಲ್ಲಿಯೇ ಇದ್ದರೂ ಸಹ ನಾನು ನನ್ನ ವಾಹನವನ್ನು ಕಾರಿನ ಎಡಭಾಗಕ್ಕೆ ತೆಗೆದುಕೊಂಡು ಹೋಗಿ ಅಪಘಾತಪಡಿಸಿ ಬಿದ್ದಿದ್ದೇನೆ ಎಂದರೆ ಸರಿಯಲ್ಲ. ಆ ಬೈಕು ಈಗಲೂ ಸಹ ನನ್ನ ಹೆಸರಿನಲ್ಲಿಯೇ ಇದೆ. ನಾನು ಹಾಜರುಪಡಿಸಿರುವ ಗಾಯದ ಪ್ರಮಾಣಪತ್ರವು ನೆರಳಚ್ಚಿನ ಪ್ರತಿ ಎಂದರೆ ಸರಿಯಲ್ಲ. ನನ್ನ ಅತಿವೇಗ ಮತ್ತು ಅಜಾಗರೂಕತೆ ಕಾರಣದಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಪರಿಹಾರ ಪಡೆಯಬೇಕು ಎಂಬ ಕಾರಣದಿಂದ 1 ನೇ ಎದುರುದಾರರೊಂದಿಗೆ ಸಮಾಲೋಚನೆ ನಡೆಸಿ ಆನಂತರ 3 ದಿನ ತಡವಾಗಿ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ನಾನೇ ಬಿದ್ದು ಗಾಯ ಮಾಡಿಕೊಂಡಿರುವ ಕಾರಣ 3 ನೇ ಎದುರುದಾರರ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ನಡೆಯದೆ ಇದ್ದು ನನಗೆ ಸಣ್ಣಪುಟ್ಟ ಸಾಮಾನ್ಯ ಗಾಯಗಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**